## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ

## ಸಿಸಿ ಸಂಖ್ಯೆ: 1376/2019

**ಪಿರ್ಯಾದಿದಾರರು:** ರಾಜ್ಯ ಪರ ಪೊಲೀಸರು,
ಚನ್ನರಾಯಪಟ್ಟಣ ನಗರ ಪೋಲೀಸ್ ಠಾಣೆ

**ವಿರುದ್ದ**

**ಆರೋಪಿತರು:**

1. ರಾಕೇಶ ಬಿನ್ ನಾಗರಾಜು,
ಸುಮಾರು 22 ವರ್ಷ ವಯಸ್ಸು,
ಅಪೇ ಗೂಡ್ಸ್ ಆಟೋ ಚಾಲಕ,
ವಾಸ: ಅಗ್ರಹಾರ ಗ್ರಾಮ,
ಹೆಚ್.ಎನ್.ಪುರ ತಾಲ್ಲೂಕು. ಹಾಸನ.
2. ನಾಗರಾಜು ಬಿನ್ ನಂಜೇಗೌಡ,
ಸುಮಾರು 55 ವರ್ಷ ವಯಸ್ಸು,
ವಾಸ: ಅಗ್ರಹಾರ ಗ್ರಾಮ, ಹಳೇಕೋಟೆ ಹೋಬಳಿ,
ಹೆಚ್.ಎನ್.ಪುರ ತಾಲ್ಲೂಕು. ಹಾಸನ.

## ದಂಡ ಪ್ರಕ್ರಿಯಾ ಸಂಹಿತೆ ಕಲಂ: 251 ರಡಿಯಲ್ಲಿ ಆರೋಪಿಯ ವಿಹಿತ ಹೇಳಿಕೆ

ದಿನಾಂಕ: 06.09.2019 ರಂದು ಬೆಳಗ್ಗೆ 11.00 ಗಂಟೆ ಸಮಯದಲ್ಲಿ, ಚನ್ನರಾಯಪಟ್ಟಣ ನಗರ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ, ಸಾಸಲುಪುರ ಗ್ರಾಮದ ಬಳಿಯಲ್ಲಿ, ಗುಳ್ಳಿಕೆರೆ ಹತ್ತಿರ ರಾಮಚಂದ್ರ ರವರ ಜಮೀನು ಹತ್ತಿರ, ಶ್ರೀನಿವಾಸ ಸಾಸಲುಪುರ ರಸ್ತೆಯಲ್ಲಿ, 1 ನೇ ಆರೋಪಿಯಾದ ನೀವು ಕೆಎ.54.147 ರ ಗೂಡ್ಸ್ ಆಟೋ ಚಾಲಕನಾಗಿದ್ದು, ಸದರಿ ಆಟೋವನ್ನು ಸಾಸಲುಪುರ ಕಡೆಯಿಂದ ಶ್ರೀನಿವಾಸಪುರದ ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಮಾನವ ಜೀವಕ್ಕೆ ಹಾನಿಯುಂಟಾಗುವ ರೀತಿಯಲ್ಲಿ ಚಲಾಯಿಸಿ, ಆ ಮೂಲಕ **1 ನೇ ಆರೋಪಿಯಾದ**

ನೀವು **ಭಾರತೀಯ ದಂಡ ಸಂಹಿತೆ ಕಲಂಃ 279** ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುವಂತೆ ಎಸಗಿರುತ್ತೀರಿ.

ಎರಡನೆಯದಾಗಿ ಅದೇ ದಿನ, ಅದೇ ಸ್ಥಳ, ಅದೇ ಸಮಯದಲ್ಲಿ, ಸಾಕ್ಷಿ.1 ರವರು ಸಾಕ್ಷಿ.2 ರವರನ್ನು ಕೆಎ.13.ಯು.2881 ರ ಸ್ಪ್ಲೆಂಡರ್ ಬೈಕಿನ ಹಿಂಬದಿಯಲ್ಲಿ ಕೂರಿಸಿಕೊಂಡು ಬರುತ್ತಿದ್ದಾಗ, 1 ನೇ ಆರೋಪಿಯಾದ ನೀವು ಕೆಎ.54.147 ರ ಗೂಡ್ಸ್ ಆಟೋವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ಸದರಿ ಬೈಕಿನ ಮುಂಭಾಗಕ್ಕೆ ಡಿಕ್ಕಿಪಡಿಸಿ ನಂತರ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಸಾಕ್ಷಿ.3 ರವರಿಗೂ ಡಿಕ್ಕಿ ಮಾಡಿ ಅಪಘಾತ ಮಾಡಿದ ಪರಿಣಾಮ, ಸಾಕ್ಷಿ.1 ಮತ್ತು 2 ರವರು ಬೈಕ್ ಸಮೇತ ಕೆಳಕ್ಕೆ ಬಿದ್ದಾಗ, ಸಾಕ್ಷಿ.1 ಮತ್ತು 3 ರವರಿಗೆ ಯಾವುದೇ ಚಿಕಿತ್ಸೆ ಪಡೆಯುವಂತಹ ಗಾಯಗಳಾಗಿರುವುದಿಲ್ಲ, ಸಾಕ್ಷಿ.2 ರವರ ಬಲಕಾಲಿನ ಮಂಡಿಗೆ ತೀವ್ರ ಸ್ವರೂಪದ ಗಾಯಗಳಾಗಿ, ಆ ಮೂಲಕ **1 ನೇ ಆರೋಪಿಯಾದ** ನೀವು **ಭಾರತೀಯ ದಂಡ ಸಂಹಿತೆ ಕಲಂಃ 338** ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುವಂತೆ ಎಸಗಿರುತ್ತೀರಿ.

ಮೂರನೆಯದಾಗಿ ಅದೇ ದಿನ, ಅದೇ ಸ್ಥಳ, ಅದೇ ಸಮಯದಲ್ಲಿ 1 ನೇ ಆರೋಪಿಯಾದ ನೀವು ಸದರಿ ಅಪಘಾತದ ಸಮಯದಲ್ಲಿ ಕೆಎ.54.147 ರ ಗೂಡ್ಸ್ ಆಟೋ ಕ್ಕೆ ವಿಮೆ ಚಾಲ್ತಿಯಲ್ಲಿ ಇಲ್ಲದೆ ಸದರಿ ವಾಹನವನ್ನು ಚಾಲನೆ ಮಾಡಿ, ಆ ಮೂಲಕ **1 ನೇ ಆರೋಪಿಯಾದ** ನೀವು **ಕಲಂಃ 196 ಐ.ಎಂ.ವಿ. ಆಕ್ಟ್** ರಡಿಯಲ್ಲಿ ಕಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುವಂತೆ ಎಸಗಿರುತ್ತೀರಿ.

ನಾಲ್ಕನೇಯದಾಗಿ ಅದೇ ದಿನ, ಅದೇ ಸ್ಥಳ, ಅದೇ ಸಮಯದಲ್ಲಿ 1 ನೇ ಆರೋಪಿಯಾದ ನೀವು, ಸದರಿ ಅಪಘಾತದ ಸಮಾಯದಲ್ಲಿ, ಚಾಲನಾ ಪರವಾನಗಿ

ಇಲ್ಲದೆ  ಕೆಎ.54.147 ರ ಗೂಡ್ಸ್ ಆಟೋವನ್ನು ಚಾಲನೆ ಮಾಡಿ, ಆ ಮೂಲಕ **1 ನೇ ಆರೋಪಿಯಾದ** ನೀವು **ಕಲಂಃ 181 ಐ.ಎಂ.ವಿ. ಆಕ್ಟ್** ರಡಿಯಲ್ಲಿ ಕಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುವಂತೆ ಎಸಗಿರುತ್ತೀರಿ.

ಐದನೇಯದಾಗಿ ಅದೇ ದಿನ, ಅದೇ ಸಂದರ್ಭದಲ್ಲಿ, 2 ನೇ ಆರೋಪಿಯಾದ ನೀವು, ವಿಮೆ ಚಾಲ್ತಿಯಲ್ಲಿ ಇಲ್ಲದ ಕೆಎ.54.147 ರ ಗೂಡ್ಸ್ ಆಟೋವನ್ನು, ಚಾಲನಾ ಪರವಾನಿಗೆ ಇಲ್ಲದ 1 ನೇ ಆರೋಪಿಗೆ ಚಾಲನೆ ಮಾಡಲು ನೀಡಿ, ಆ ಮೂಲಕ **2 ನೇ ಆರೋಪಿಯಾದ** ನೀವು **ಕಲಂಃ 180(3) ಐ.ಎಂ.ವಿ. ಆಕ್ಟ್** ರಡಿಯಲ್ಲಿ ಕಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುವಂತೆ ಎಸಗಿರುತ್ತೀರಿ.

(ದೀಪು ಬಿ.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ: 1376/2019**

**ಪಿರ್ಯಾದಿದಾರರು:** ರಾಜ್ಯ ಪರ ಪೊಲೀಸರು,
ಚನ್ನರಾಯಪಟ್ಟಣ ನಗರ ಪೋಲೀಸ್ ಠಾಣೆ

**ವಿರುದ್ಧ**

**ಆರೋಪಿತರು:** 1. ರಾಕೇಶ ಬಿನ್ ನಾಗರಾಜು,
ಸುಮಾರು 22 ವರ್ಷ ವಯಸ್ಸು,
ಅಪೇ ಗೂಡ್ಸ್ ಆಟೋ ಚಾಲಕ,
ವಾಸ: ಅಗ್ರಹಾರ ಗ್ರಾಮ,
ಹೆಚ್.ಎನ್.ಪುರ ತಾಲ್ಲೂಕು. ಹಾಸನ.

**ಆಪಾದನೆ**

**ಪ್ರಶ್ನೆ:** 1. ಈಗ ನಿಮಗೆ ಓದಿ ಹೇಳಲಾದ ನಿಮ್ಮ ಮೇಲಿನ ಆಪಾದನೆಯು ನಿಮಗೆ ತಿಳಿಯಿತೆ?
ಉತ್ತರ: ಅರ್ಥವಾಯಿತು

**ಪ್ರಶ್ನೆ:** 2. ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ನಡೆಯಲೆಂದು ಬಯಸುತ್ತೀರಾ?
ಉತ್ತರ: ಒಪ್ಪಿಕೊಳ್ಳುತ್ತೇನೆ

(ಈ ಆಪಾದನೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿದಿರುವ ಭಾಷೆಯಲ್ಲಿ ಓದಿ ಹೇಳಿ ಕೇಳಲಾಗಿ ಆರೋಪಿಯು ನೀಡಿರುವ ಉತ್ತರಗಳನ್ನು ಪಡೆದುಕೊಂಡಿದ್ದು ಅವು ಸರಿ ಇವೆ ಎಂದು ದೃಢೀಕರಿಸಲಾಯಿತು)

ದಿನಾಂಕ: **03.11.2023**

(ದೀಪು ಬಿ.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆಃ 1376/2019**

**ಪಿರ್ಯಾದಿದಾರರುಃ** ರಾಜ್ಯ ಪರ ಪೊಲೀಸರು,
ಚನ್ನರಾಯಪಟ್ಟಣ ನಗರ ಪೋಲೀಸ್ ಠಾಣೆ

**ವಿರುದ್ದ**

**ಆರೋಪಿತರುಃ** 2. ನಾಗರಾಜು ಬಿನ್ ನಂಜೇಗೌಡ,
ಸುಮಾರು 55 ವರ್ಷ ವಯಸ್ಸು,
ವಾಸಃ ಅಗ್ರಹಾರ ಗ್ರಾಮ, ಹಳೇಕೋಟೆ ಹೋಬಳಿ,
ಹೆಚ್.ಎನ್.ಪುರ ತಾಲ್ಲೂಕು. ಹಾಸನ.

**ಆಪಾದನೆ**

**ಪ್ರಶ್ನೆಃ** 1. ಈಗ ನಿಮಗೆ ಓದಿ ಹೇಳಲಾದ ನಿಮ್ಮ ಮೇಲಿನ ಆಪಾದನೆಯು ನಿಮಗೆ ತಿಳಿಯಿತೆ ?

ಉತ್ತರಃ ಅರ್ಥವಾಯಿತು

**ಪ್ರಶ್ನೆಃ** 2. ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ನಡೆಯಲೆಂದು ಬಯಸುತ್ತೀರಾ ?

ಉತ್ತರಃ ಒಪ್ಪಿಕೊಳ್ಳುತ್ತೇನೆ

(ಈ ಆಪಾದನೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿದಿರುವ ಭಾಷೆಯಲ್ಲಿ ಓದಿ ಹೇಳಿ ಕೇಳಲಾಗಿ ಆರೋಪಿಯು ನೀಡಿರುವ ಉತ್ತರಗಳನ್ನು ಪಡೆದುಕೊಂಡಿದ್ದು ಅವು ಸರಿ ಇವೆ ಎಂದು ದೃಢೀಕರಿಸಲಾಯಿತು)

ದಿನಾಂಕಃ **03.11.2023**

(ದೀಪು ಬಿ.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ